ಪ್ರಬಂಧ

# ಸ್ನಾನವೆಂಬ ದೇಹ ಶುದ್ಧಿ



**ವೆಂಕಟೇಶ ಮಾಚಕನೂರ**

ಕಲೆ: ಭರತ್ ಲದ್ದಿಯವರ್

ಸ್ನಾನ ಅಥವಾ ಜಳಕ ಅನ್ನುವುದು ನಮ್ಮ ದೈನಂದಿನ ವಾಡಿಕೆಯ ಕ್ರಿಯೆ. ತುಂಬಾ ವೈಯಕ್ತಿಕವಾದುದು. ನಮ್ಮ ದೇಹವನ್ನು ನಿತ್ಯ ಶುಚಿಗೊಳಿಸಿಕೊಳ್ಳುವ ಕರ್ಮ. ಹೆಚ್ಚಾಗಿ ಏಕಾಂತದಲ್ಲಿ ನಡೆಯುವಂಥದ್ದು. ಸ್ನಾನವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆಬೇರೆ ಹೆಸರಿನಿಂದ ಕರೀತಾರೆ. ಮೈಮೇಲೆ ನಾಲ್ಕು ಚೊಂಬು ನೀರು ಹುಯ್ದುಕೊಳ್ಳುವುದರಿಂದ ಹಿಡಿದು, ಅಭ್ಯಂಜನ ಸ್ನಾನ, ಎರೆದುಕೊಳ್ಳುವುದು, ಮಡಿಯಾಗುವುದು, ನದಿಗಳಲ್ಲಿನ ಪವಿತ್ರ ಸ್ನಾನ ಎಂದು ವಿವಿಧ ಬಗೆಯಲ್ಲಿ ಸ್ನಾನ ನಡೆಯುತ್ತದೆ.

ಮಾಘ ಮಾಸದಲ್ಲಿ ಹತ್ತು ಹನ್ನೆರಡು ವರ್ಷಗಳಿಗೊಮ್ಮೆ ನಮ್ಮಲ್ಲಿ ನಡೆಯುವ ಬೃಹತ್ ಕುಂಭಮೇಳಗಳು ಜಗತ್ಪ್ರಸಿದ್ಧ. ಅವು ಸಾಮೂಹಿಕವಾಗಿ ನಡೆಯುವ ಪವಿತ್ರ ಸ್ನಾನಗಳು. ಹೆಣ್ಣು ಗಂಡು ಎಂಬ ಭೇದವಿಲ್ಲದೆ ನಡೆಯುವ ಪವಿತ್ರ ಸ್ನಾನದ ಪ್ರಕ್ರಿಯೆಗಳು. ಪ್ರಯಾಗ, ಹರಿದ್ವಾರ, ಕಾಶಿ, ಉಜ್ಜೈನಿ, ನಾಸಿಕ್, ರಾಜಮಂಡ್ರಿ ಮುಂತಾದ ಸ್ಥಳಗಳು ನಮ್ಮಲ್ಲಿ ಪವಿತ್ರ ಸ್ನಾನಕ್ಕಾಗಿ ಪ್ರಸಿದ್ಧ. ನಮ್ಮ ರಾಜ್ಯದ ಮಂಡ್ಯ ಜಿಲ್ಲೆಯ ತ್ರಿವೇಣಿ ಸಂಗಮದಲ್ಲಿ ಕೂಡ ಇಂಥ ಕುಂಭಮೇಳವೊಂದು ಸರ್ಕಾರದ ಪ್ರಾಯೋಜಕತ್ವದಲ್ಲಿ ಇತ್ತೀಚೆಗೆ ನಡೆಯಿತು. ಸೃಷ್ಟಿಕರ್ತ ಬ್ರಹ್ಮ, ಸೃಷ್ಟಿ ಕಾರ್ಯ ಪೂರ್ಣಗೊಂಡ ಬಳಿಕ ಪ್ರಯಾಗದ ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡಿ ಯಜ್ಞ ಮಾಡಿದನಂತೆ. ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡುವುದರಿಂದ ಪಾಪ ಪರಿಹಾರ, ವೈಕುಂಠ ಪ್ರಾಪ್ತಿ ಎಂದು ನಮ್ಮ ಪುರಾಣಗಳು ಸಾರುತ್ತವೆ. ಹೀಗಾಗಿ, ಕುಂಭಮೇಳಗಳಲ್ಲಿ ನೆರೆವ ಅಸಂಖ್ಯಾತ ಜನರ ಸ್ನಾನದ ಪುಣ್ಯ ಬಲದಿಂದ ವೈಕುಂಠ ಈಗಾಗಲೇ ಭರ್ತಿಯಾಗಿರಲು ಸಾಕು.

ಸ್ನಾನ ಕುರಿತು ನನ್ನ ಜಿಜ್ಞಾಸೆಗೆ ಮುಖ್ಯ ಕಾರಣ ಇತ್ತೀಚೆಗೆ ಕಂಡ ಒಂದು ಸುದ್ದಿ. ಇರಾನ್ ಮೂಲದ ಅಮೌ ಹಾಜಿ ಎಂಬ 94 ವರ್ಷದ ವ್ಯಕ್ತಿ ಸುಮಾರು ಅರವತ್ತು ವರ್ಷಗಳಿಂದ ಸ್ನಾನವನ್ನು ಮಾಡದ 'ವಿಶ್ವದ ಅತ್ಯಂತ ಕೊಳಕು ಮನುಷ್ಯ' ಮೊನ್ನೆ ನಿಧನವಾದ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಸ್ನಾನ ಮಾಡಿದರೆ ತಾನು ಎಲ್ಲಿ ಅನಾರೋಗ್ಯಕ್ಕೆ ಒಳಗಾಗುತ್ತೇನೋ ಎಂಬ ಭಯದಿಂದ ಅವನು ಸ್ನಾನವನ್ನು ಮಾಡದೆ ದೂರದ